ಈ) ಸುಮಾರು ನೂರು ಪ್ರತ್ಯೇಕ ಕುಶಲಕರ್ಮಿಗಳು ಚರ್ಮ ಹದ ಮಾಡುವ ಕಾರ್ಯದಲ್ಲಿ ನಿರತರಾಗಿದ್ದು, ತಿಂಗಳಿಗೆ ಸುಮಾರು 3000 ಕೆ.ಜಿ.ಗಳಷ್ಟು ಧೋರ್ ಚರ್ಮವನ್ನು ಉತ್ಪಾದಿಸುತ್ತಿದ್ದು, ಈ ಚರ್ಮವನ್ನು ಮುಖ್ಯವಾಗಿ ಪಾದರಕ್ಷೆಗಳು ಹಾಗೂ ರೈತರು ಉಪಯೋಗಿಸುವ ಉಪಯುಕ್ತ ವಸ್ತುಗಳನ್ನು ತಯಾರು ಮಾಡುವ ಸಲುವಾಗಿ ಉಪಯೋಗಿಸಲಾಗುತ್ತಿದೆ.

ರಾಜ್ಯದಲ್ಲಿ ಕಬ್ಬು ಬೆಳೆಯುವ ಪ್ರಮಾಣ

469 - ಶ್ರೀ ಅಶೋಕ ಎಸ್. ಕಾಟವೆ (ಹುಬ್ಬಳ್ಳಿನಗರ) : ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜಿಲ್ಲಾವಾರು ಕಬ್ಬು ಬೆಳೆಯುವ ಪ್ರಮಾಣ ಎಷ್ಟು? ರಾಜ್ಯದಲ್ಲಿ ಉತ್ಪಾದಿಸುವ ಕಬ್ಬು (ಬೆಳೆಯುವ ಕಬ್ಬು) ಎಷ್ಟು? ರಾಜ್ಯದಲ್ಲಿ ಖಾಸಗಿ/ಸಹಕಾರಿ ಮತ್ತು ಸರಕಾರಿ ಸ್ಥಕ್ಕರೆ ಕಾರ್ಖಾನೆಗಳೆಷ್ಟು? ರೈತರು ಬೆಳೆದ ಕಬ್ಬಿನಲ್ಲಿ ಎಷ್ಟು ಪ್ರತಿಶತ ಕಬ್ಬನ್ನು ಅರೆಯುವ ಸಾಮರ್ಥ್ಯವಿದೆ. ಮಿಕ್ಕಿದ ಕಬ್ಬನ್ನು ಯಾವ ರೀತಿಯಲ್ಲಿ ಉಪಯೋಗಿಸಲು ಸರ್ಕಾರ ಯೋಜಿಸಿದೆ?

ಆ) ಹೊರ ರಾಜ್ಯಗಳ ಸಾಗಾಟ ನಿಷೇದದಿಂದ ಧಾರವಾಡ ಜಿಲ್ಲೆ ಮತ್ತು ಬೆಳಗಾಂನ ಜಿಲ್ಲಾ ರೈತರು ಹಾನಿಗೆ ಈಡಾಡುವುದಕ್ಕೆ ಸರ್ಕಾರದ ಅಭಿಪ್ರಾಯವೇನು? 1995-96ನೇ ಪ್ರಸಕ್ತ ಸಾಲಿನಲ್ಲಿ ರೈತರಿಗೆ ಎಷ್ಟು ಲಕ್ಷ ನಷ್ಟವಾಗಿದೆ? ಈ ಬಗ್ಗೆ ಸರ್ಕಾರ ಸಮೀಕ್ಷೆ ನಡೆಸಿದೆಯೇ? ನಡೆಸಿದ್ದಲ್ಲಿ ಇದರ ಬಗ್ಗೆ ಸರ್ಕಾರದ ಉಪ ಕ್ರಮವೇನು?.

ಇ) ರಾಜ್ಯದಲ್ಲಿ ರೈತರು ಬೆಳೆದ ಕಬ್ಬು ನುರಿಸಲು ಸದ್ಯ ಇರುವ ಸಕ್ಕರೆ ಗಿರಿಣಿಗಳು ಸಾಕಾಗಲಾರವು ಎಂಬುದಕ್ಕೆ ಸರ್ಕಾರದ ಸ್ಪಷ್ಟ ಹೇಳಿಕೆ ಏನು? ಸಾಕಾಗಲಾರವು ಎಂಬ ನಿಲುವು ನಿಮ್ಮದು ಆದಲ್ಲ ಹೊಸದಾಗಿ ಸಕ್ಕರೆ ಗಿರಣಿಗಳನ್ನು ಸ್ಥಾಪಿಸಿರುವರೋ, ಹೇಗೆ? ಸ್ಥಾಪಿಸಲು ಮುಂದೆ ಬಂದಲ್ಲಿ ಅನುಮತಿ ನೀಡಲಾಗುವುದೆ? ಈ ಬಗ್ಗೆ ಬಂದಂತ ಅರ್ಜಿಗಳ ವಿವರ ನೀಡುವುದು.

ಶ್ರೀ ಪಿ.ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಜೀವಿಶಾಸ್ತ್ರ ಮತ್ತು ಪರಿಸರ ರಾಜ್ಯ ಸಚಿವರು) :

ಅ) ಪ್ರಸಕ್ತ ಸಾಲಿನಲ್ಲಿ ರಾಜ್ಯದಲ್ಲಿ ಜಿಲ್ಲಾವಾರು ಕಬ್ಬು ಬೆಳೆಯುವ ಪ್ರಮಾಣದ ಅಂದಾಜಿನ ವಿವರವನ್ನು ಅಡಕ-ಅ ದಲ್ಲಿ ನೀಡಲಾಗಿದೆ. ರಾಜ್ಯದಲ್ಲಿ 1995-96ರ ಸಾಲಿನಲ್ಲಿ ಸುಮಾರು 214.40 ಲಕ್ಷ ಟನ್ ಕಬ್ಬು ಉತ್ಪಾದನೆಯಾಗಬಹುದೆಂದು ಅಂದಾಜು ಮಾಡಲಾಗಿದೆ. ರಾಜ್ಯದಲ್ಲಿ ಸಹಕಾರಿ ಕ್ಷೇತ್ರದಲ್ಲಿ 17 ಜಂಟಿ ಕ್ಷೇತ್ರದಲ್ಲಿ 2, ಸಾರ್ವಜನಿಕ ಕ್ಷೇತ್ರದಲ್ಲಿ 2 ಹಾಗೂ ಖಾಸಗಿ ಕ್ಷೇತ್ರದಲ್ಲಿ 9 ಸಕ್ಕರೆ ಕಾರ್ಖಾನೆಗಳಿರುತ್ತವೆ. ಪ್ರಸ್ತುತ ರೈತರು ಬೆಳೆದ ಕಬ್ಬಿನಲ್ಲಿ ಸುಮಾರು ಶೇ. 58ರಷ್ಟು ಕಬ್ಬನ್ನು ಕಾರ್ಖಾನೆಗಳು ಅರೆಯಲು ಸಾಮರ್ಥ್ಯ ಪಡೆದಿರುತ್ತವೆ. ಉಳಿದ ಕಬ್ಬಿನಲ್ಲಿ ಕಬ್ಬಿನ ನಾಟಿಗಾಗಿ,

ಖಂಡಸಾರಿ ಸಕ್ಕರೆ ತಯಾರಿಕೆಗೆ, ಬೆಲ್ಲ ತಯಾರಿಕೆಗಾಗಿ ಹಾಗೂ ಇತರೆ ಉದ್ದೇಶಗಳಿಗೆ ಬಳಕೆಯಾಗಿ ಸುಮಾರು 26ಲಕ್ಷ ಟನ್ ಹೆಚ್ಚುವರಿ ಕಬ್ಬು ಆಗುವ ಅಂದಾಜಿರುತ್ತದೆ. ಕಾರ್ಖಾನೆಗಳ ಕಬ್ಬು ಅರೆಯುವ ಸಾಮರ್ಥ್ಯವನ್ನು ವಿಸ್ತರಿಸುವುದು ಮೂಲಕ ಹಾಗೂ ನೆರ ರಾಜ್ಯದಿಂದ ಮುಖ್ಯವಾಗಿ ಮಹಾರಾಷ್ಟ್ರವನ್ನು ನಮ್ಮ ರಾಜ್ಯದಿಂದ ಕಬ್ಬನ್ನು ಖರೀದಿಸುವಂತೆ ಕೋರುವುದರ ಮೂಲಕ ಈ ಕಬ್ಬಿಗೆ ಅರೆಯುವ ವ್ಯವಸ್ಥೆಯನ್ನು ಕಲ್ಪಿಸಲು ಯೋಜಿಸಿದೆ.

ಅ) ಮಹಾರಾಷ್ಟ್ರ ಸರ್ಕಾರವು ತನ್ನ ಗಡಿ ಭಾಗದ ಸಕ್ಕರೆ ಕಾರ್ಖಾನೆಗಳು, ಧಾರವಾಡ, ಬೆಳಗಾವಿ ಮತ್ತು ಇತರೆ ಜಿಲ್ಲೆಗಳಿಂದ ಕಬ್ಬು ಖರೀದಿಸುವುದರ ವಿರುದ್ಧ ನಿಷೇಧ ಹೇರಿರುವುದರಿಂದ ಸದರಿ ಜಿಲ್ಲೆಯ ರೈತರುಗಳಿಗೆ ಹೆಚ್ಚುವರಿ ಕಬ್ಬಿನ ಸಮಸ್ಯೆಯಿಂದ ತೊಂದರೆ ಉದ್ಭವಿಸಿದೆ. 1995-96ನೇ ಹಂಗಾಮು ಚಾಲ್ತಿಯಲ್ಲಿದ್ದು ಸಮಸ್ಯೆ ಪರಿಹಾರಕ್ಕಾಗಿ ಸರ್ಕಾರ ತೀವ್ರ ಕ್ರಮವಿಟ್ಟಿದೆ, ರೈತರಿಗೆ ನಷ್ಟವಾಗಿರುವ ಬಗ್ಗೆ ಯಾವ ಸಮೀಕ್ಷೆಯನ್ನು ನಡೆಸಿರುವುದಿಲ್ಲ.

ಇ) ರಾಜ್ಯದಲ್ಲಿ ರೈತರು ಬೆಳೆದ ಕಬ್ಬು ನುರಿಸಲು ಸಧ್ಯಕ್ಕೆ ಇರುವ 30 ಕಾರ್ಖಾನೆಗಳು ಸಾಲುವುದಿಲ್ಲ. ಈ ಕಾರಣದಿಂದಲೇ ಹಾಲಿ ಇರುವ 12 ಕಾರ್ಖಾನೆಗಳ ಸಾಮರ್ಥ್ಯ ವಿಸ್ತರಣೆಗಾಗಿ ಅನುಮತಿ ಪತ್ರಗಳನ್ನು ಕೋರಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಗಳನ್ನು ಶಿಫಾರಸ್ಸು ಮಾಡಲಾಗಿದೆ. ಈಗಾಗಲೇ ಕೇಂದ್ರ ಸರ್ಕಾರದಿಂದ ಹೊಸ ಕಾರ್ಖಾನೆಗಳ ಸ್ಥಾಪನೆಗಾಗಿ 8 ಅನುಮತಿ ಪತ್ರಗಳ ಜೊತೆಗೆ ಇನ್ನೂ ಹೆಚ್ಚಿನ ಹೊಸ ಕಾರ್ಖಾನೆಗಳ ಸ್ಥಾಪನೆಗಾಗಿ ರಾಜ್ಯ ಸರ್ಕಾರದ ಅನುಮತಿ ಪತ್ರ ಕೋರಿ ಶಿಫಾರಸ್ಸು ಮಾಡಲಾಗಿರುವ ಅರ್ಜಿಗಳು ಕೇಂದ್ರ ಸರ್ಕಾರದ ಮುಂದೆ ಇದೆ. ಹೊಸ ಸಕ್ಕರೆ ಕಾರ್ಖಾನೆಗಳ ಸ್ಥಾಪನೆಗೆ ಇರುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇರುತ್ತದೆ. ಒಟ್ಟು 57 ಅರ್ಜಿಗಳು ಹೊಸ ಕಾರ್ಖಾನೆ. ಸ್ಥಾಪನೆಗಾಗಿ ಬಂದಿದ್ದು, ಇವುಗಳಲ್ಲಿ 39 ಅರ್ಜಿಗಳನ್ನು ರಾಜ್ಯ ಸರ್ಕಾರವು ಶಿಫಾರಸ್ಸು ಮಾಡಿದ್ದು ಹಿಂದಿನ ಬಾಕಿ 6 ಅರ್ಜಿಗಳೂ ಸೇರಿ ಒಟ್ಟು 45 ಅರ್ಜಿಗಳು ಭಾರತ ಸರ್ಕಾರದ ಮುಂದೆ ಇರುತ್ತವೆ.

1995-96ರ ಸಾಲಿನಲ್ಲಿ ರಾಜ್ಯದಲ್ಲಿ ಉತ್ಪಾದನೆಯಾಗಬಹುದಾದ ಕಬ್ಬಿನ ಪ್ರಮಾಣದ ತಃಖ್ತೆ ಜಿಲ್ಲಾವಾರು ಮಾಹಿತಿ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಕಬ್ಬಿನ ಕ್ಷೇತ್ರ (ಹೆಕ್ಟೇರ್‌ಗಳಲ್ಲಿ)	ಉತ್ಪಾದನೆಯಾಗಬಹುದಾದ ಕಬ್ಬಿನ ಪ್ರಮಾಣ ಲಕ್ಷ ಮೆ.ಟನ್‌ಗಳಲ್ಲಿ
1.	ಬೆಂಗಳೂರು ಅರ್ಬನ್	150	0.15
2.	ಬೆಂಗಳೂರು ಗ್ರಾಮಾಂತರ	1790	1.30
3.	ಬೆಳಗಾವಿ	89500	70.00
4.	ಬಳ್ಳಾರಿ	8752	5.40
5.	ಬೀದರ್	19235	10.16
6.	ಬಿಜಾಪುರ	32000	26.00
7.	ಚಿಕ್ಕಮಗಳೂರು	2000	1.50
8.	ಚಿತ್ರದುರ್ಗ	7000	6.00
9.	ದಕ್ಷಿಣ ಕನ್ನಡ	2601	1.45
10.	ಧಾರವಾಡ	5715	4.00
11.	ಗುಲ್ಬರ್ಗಾ	4500	3.50
12.	ಹಾಸನ	7430	7.43
13.	ಕೊಡಗು	24	0.01
14.	ಕೋಲಾರ	3480	2.90
15.	ಮಂಡ್ಯ	37108	38.50
16.	ಮೈಸೂರು	16000	16.50
17.	ರಾಯಚೂರು	3120	2.02
18.	ಶಿವಮೊಗ್ಗ	13850	15.00
19.	ತುಮಕೂರು	1086	1.08
20.	ಉತ್ತರ ಕನ್ನಡ	1999	1.50
	ಒಟ್ಟು	**257340**	**214.40**